ದಿನಾಂಕ **06.12.2019** 5 ಓ ಎಸ್ . ನಂ. **128/2015**

ಪಿ.ಡಬ್ಲ್ಯೂ.4

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಲ್.ಜಿ.ಜಿ ರವರಿಂದಃ-</u>

ನಾನು ದಾವಾ ಸ್ವತ್ತು ನೋಡಿಲ್ಲ. ನಾನು ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿದ್ದೇನಾ ಎಂದರೆ ಸಾಕ್ಷಿಯು **1** ನೇ ಪ್ರತಿವಾದಿಯ ತಾಯಿ ನಿಂಗಮ್ಮನವರ ಕ್ರಯ ಪತ್ರ ಇದ್ದು, ದಾಖಲಾತಿ ನೋಡಿಕೊಂಡು ಕ್ರಯದ ಕರಾರು ಬರೆದಿದ್ದೆ ಎಂದು ನುಡಿಯುತ್ತಾರೆ. ವಾದಿ ನನ್ನ ಬಳಿ ಕ್ರಯದ ಕರಾರು ಬರೆಸಲು ಬಂದಾಗ ನನಗೆ ನಿಂಗಮ್ಮನವರ ಹೆಸರಿನಲ್ಲಿರುವ ಕ್ರಯ ಪತ್ರ ಮತ್ತು ಪಹಣಿ ಕೊಟ್ಟಿದ್ದರು. ಪಹಣಿಯಲ್ಲಿ ನಿಂಗಮ್ಮನವರ ಹೆಸರಿತ್ತು. ನಾನು **2009-10** ರಿಂದ ಪತ್ರ ಬರಹಗಾರನಾಗಿದ್ದೇನೆ. ಉಪನೊಂದಣಿ ಕಚೇರಿಯಲ್ಲಿ ಕ್ರಯದ ಕರಾರು ನೊಂದಣಿ ಆಗ ಬೇಕಾದರೆ ಆ ದಾಖಲೆ ಮಾಡಿಕೊಡುವ ವ್ಯಕ್ತಿಯ ಹೆಸರು ಪಹಣಿಯಲ್ಲಿ ಇರಬೇಕು ಎಂದರೆ ಸಾಕ್ಷಿಯು ಕ್ರಯ ಪತ್ರ ಮಾಡಿಕೊಡಲು ಬೇಕು ಕ್ರಯದ ಕರಾರು ಮಾಡಿಕೊಡಲು ಬೇಡ ಎಂದು ನುಡಿಯುತ್ತಾರೆ. ಪಹಣಿ ಯಲ್ಲಿ ಹೆಸರು ಇಲ್ಲದಿದ್ದರೂ ಕ್ರಯದ ಕರಾರು ನೊಂದಣಿ ಮಾಡಬಹುದು ಎಂಬ ಬಗ್ಗೆ ಉಪನೊಂದಣಿ ಕಚೇರಿಯ ನಿರ್ದೇಶನದ ಬಗ್ಗೆ ದಾಖಲೆ ಇದ್ದು, ಅದು ನನ್ನ ಬಳಿ ಇರುವುದಿಲ್ಲ ಅದನ್ನು ನನಗೆ ಹಾಜರು ಮಾಡಲು ಆಗುವುದಿಲ್ಲ.

ಕ್ರಯದ ಕರಾರು ಬರೆಯುವಾಗ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಎನ್ನುವ ಬಗ್ಗೆ ನಾನು ದಾಖಲೆ ನೋಡಿರಲಿಲ್ಲ. ವ್ಯಾಪಾರಕ್ಕೆ ಯಾರು ಯಾರು ಎಲ್ಲಿ ಸೇರಿದ್ದರು ಎಂದು ನನಗೆ ಗೊತ್ತಿಲ್ಲ, ಅವರು ಹೊರಗಡೆ ವ್ಯವಹಾರ ಮಾಡಿಕೊಂಡು ಬಂದಿದ್ದರು. **10** ಲಕ್ಷ ರೂ. ಗಳಿಗೆ ಆಸ್ತಿ

ಮಾರಾಟ ಮಾಡುವುದು ಎಂದು ನಿಗದಿ ಯಾಗಿದೆ ಎಂದು ನನಗೆ ವಾದಿ ತಿಳಿಸಿದ್ದರು. ಸಾಕ್ಷಿಯು ಪುನಃ ಇಬ್ಬರು ತಿಳಿಸಿದ್ದರು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಪಹಣಿದಾರರ ಮಗನೇ ಎನ್ನುವ ಬಗ್ಗೆ ನಾನು ಯಾವ ದಾಖಲೆ ನೋಡಿದ್ದೆ ಎಂದರೆ ಸಾಕ್ಷಿಯು ವಿಭಾಗ ಪತ್ರ ಕೊಟ್ಟಿದ್ದರು ಎಂದು ನುಡಿಯುತ್ತಾರೆ. 2012 ರಲ್ಲಿ ವಿಭಾಗ ಪತ್ರ ಆಗಿತ್ತು. ವಿಭಾಗ ಪತ್ರದ ಪ್ರಕಾರ ಯಾರು ಯಾರಿಗೆ ಎಷ್ಟೇಷ್ಟು ಆಸ್ತಿ ಹೋಗಿದೆ ಎಂದು ನಾನು ನೋಡಿರಲಿಲ್ಲ. ಕ್ರಯದ ಕರಾರು ಬರೆಯುವ ಮೊದಲು ನಾನು ನಕಾಕ್ಷೆ ಮತ್ತು ಹದ್ ಬಸ್ತ್ ದಾಖಲೆ ನೋಡಿರಲಿಲ್ಲ. ನಿಂಗಮ್ಮನವರ ಮಗನೇ ನಾಗಯ್ಯ ಎಂದು ತೋರಿಸಲು ನನಗೆ ವಂಶವೃಕ್ಷ ಕೊಟ್ಟಿರಲಿಲ್ಲ. ನಾಗಯ್ಯ ನಿಂಗಮ್ಮನವರ ಮಗನೇ ಎಂದು ತೋರಿಸಲು ನನಗ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಕೊಟ್ಟಿರಲಿಲ್ಲ. ಸಾಲದ ಕರಾರು ಮಾಡುವ ಬದಲು 1 ನೇ ಪ್ರತಿವಾದಿಗೆ ದಾವಾ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಇಲ್ಲದಿದ್ದರೂ ಕೂಡ ಉಪನೊಂದಣೆ ಕಚೇರಿಯಲ್ಲಿ ಸೃಷ್ಟಿತ ಕ್ರಯದ ಕರಾರನ್ನು ನೊಂದಣಿ ಮಾಡಿಸಿದ್ದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆಗಿದ್ದು ಈಗಲೂ ಅದು ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ವಿಭಾಗ ಪತ್ರ ತೋರಿಸಿದ್ದರು ಎಂದು ನುಡಿಯುತ್ತಾರೆ. ವಾದಿಯ ಹೇಳಿಕೆಯ ಮೇರೆಗೆ ನಾನು ಕ್ರಯದ ಕರಾರನ್ನು ಸೃಷ್ಟಿಸಿದ್ದು ವಾದಿಯಾಗಲೀ, 1 ನೇ ಪ್ರತಿವಾದಿಯಾಗಲೀ ನನಗೆ ಯಾವುದೇ ದಾಖಲೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರ, ಪಹಣಿ ಮತ್ತು ಕ್ರಯ ಪತ್ರಗಳನ್ನು 1 ನೇ ಪ್ರತಿವಾದಿ ನನ್ನ ಸಮಕ್ಷಮ ವಾದಿಗೆ ಕೊಟ್ಟಿದ್ದರಾ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ 2 ಷರಾ ನಾನೇ ಬರೆದಿದ್ದೆ. ನಿಪಿ 2 ನ್ನು ಉಪನೊಂದಣಿ

ಕಚೇರಿಯಲ್ಲಿ ಕ್ರಯದ ಕರಾರಿನ ಜೊತೆ ನೊಂದಣಿ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಖರ್ಚು ಉಳಿಯುತ್ತದೆ ಎಂದು ಷರಾ ಬರೆಯಲು ನಾಗಯ್ಯ ತಿಳಿಸಿದ್ದರು ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಸಹಿ ಮಾಡುತ್ತಾರೆ ಎಂದರೆ ಸರಿ. ಷರಾದಲ್ಲಿ ಹೆಬ್ಬೆಟ್ಟಿನ ಗುರುತುಗಳನ್ನು ನಾನೇ ಹಾಕಿಸಿದ್ದೆ. ಷರಾದಲ್ಲಿರುವ ಸಹಿಗಳು ಮತ್ತು ಹೆಬ್ಬೆಟ್ಟಿನ ಗುರುತುಗಳು 1 ಮತ್ತು 2 ನೇ ಪ್ರತಿವಾದಿಗಳದ್ದು ಅಲ್ಲ ಎಂದರೆ ನಾನೇ ಹಾಕಿಸಿದ್ದೆ ಎಂದು ನುಡಿಯುತ್ತಾರೆ. ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.